

# ಬದುಕಿನ ಪಾಠ ಕಲಿಸುವ ಬ್ರಿಟನ್





ಲಂಡನ್ ಟವರ್ ಅರಮನೆ

■ ಚಂದ್ರಹಾಸ ಹಿರೇಮಳಲಿ

ಲಂಡನ್‌ನ ಕೆನ್ಸಿಂಗ್ಟನ್ ರಸ್ತೆಯಿಂದ ವಿಕ್ಟೋರಿಯಾ ರಸ್ತೆಗೆ ಟ್ಯೂಬ್‌ನಲ್ಲಿ (ಸುರಂಗ ಮೆಟ್ರೊ ಜಾಲ) ಬಂದಿಳಿದ ನಾವು ಶಾಪಿಂಗ್ ಮಾಲ್‌ಗಳ ಕಡೆ ಹೋಗಲು ಚಲಿಸುವ ಮೆಟ್ಟಿಲು ಏರಿದೆವು.

ನಮಗೆ ಲಂಡನ್ ನಗರ ತೋರಿಸಲು ಜತೆಗೆ ಬಂದಿದ್ದ, ಕರ್ನಾಟಕದವರೇ ಆದ ಅಲ್ಲಿನ ಖಾಸಗಿ ಕಂಪನಿ ಉದ್ಯೋಗಿ, ಗೆಳೆಯ ಪ್ರಶಾಂತ್‌ಕುಮಾರ್ ಬಲಕ್ಕೆ ನಿಲ್ಲುವಂತೆ ಸನ್ನೆ ಮಾಡಿದರು. ನಾನು ಬಲಕ್ಕೆ ಸರಿಯುತ್ತಿದ್ದಂತೆ ಎಡ ಭಾಗದಿಂದ ಹಲವರು ಚಲಿಸುತ್ತಿದ್ದ ಮೆಟ್ಟಿಲನ್ನೇ ಸರಸರನೆ ಏರಿ ಮುಂದೆ ಸಾಗಿದರು.

ನನಗೆ ನಿಜಕ್ಕೂ ಆಶ್ಚರ್ಯ!. ಮೆಟ್ಟಿಲು ವೇಗವಾಗಿಯೇ ಚಲಿಸುತ್ತಿವೆಯಲ್ಲ. ನಿಂತರೆ ಆಯಿತು ಮತ್ತೆ ಏಕೆ ನಿಯಮ ಎಂದೆ. ಇಲ್ಲಿ ಪ್ರತಿಯೊಬ್ಬರ ಜೀವ ಹಾಗೂ ಸಮಯ ಅಮೂಲ್ಯ. ಈ ಎರಡಕ್ಕೆ ಅತ್ಯಂತ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಚಲಿಸುವ ಮೆಟ್ಟಿಲಿಗಿಂತಲೂ ತುರ್ತಾಗಿ ಹೋಗುವವರಿಗೆ ಅಡ್ಡಿ ಮಾಡಬಾರದು ಎನ್ನುವ ಕಾರಣಕ್ಕೆ ತಾಳ್ಮೆಯಿಂದ ಸಾಗುವವರು ಬಲ ಭಾಗದಲ್ಲೇ ಸಾಲಾಗಿ ನಿಲ್ಲಬೇಕು. ಎಡಭಾಗದಲ್ಲಿ ವೇಗವಾಗಿ ಹೋಗುವವರಿಗೆ ದಾರಿ ಬಿಡಬೇಕು ಎನ್ನುವುದು ಇಲ್ಲಿನ ನಿಯಮ ಎಂದು ಪ್ರಶಾಂತ್ ವಿವರಿಸಿದರು.

ಸರಿಸುಮಾರು 90 ಲಕ್ಷ ಜನಸಂಖ್ಯೆ ಇರುವ ಲಂಡನ್ ನಗರದಲ್ಲಿ ಹೆಜ್ಜೆ ಹೆಜ್ಜೆಗೂ ಐಷಾರಾಮಿ ಕಾರುಗಳದ್ದೇ ದರ್ಬಾರ್. ಈಚೆಗೆ ಅಲ್ಲೂ ಕಾರುಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿದೆ. ಪ್ರಮುಖ ರಸ್ತೆಗಳಲ್ಲಿ 10 ಕಿಲೋಮೀಟರ್ ಸಾಗಲು ಅರ್ಧ ಗಂಟೆಗೂ ಹೆಚ್ಚು ಸಮಯ